ಸಾಧು ಶೆಟ್ಟರತ್ತ ತಿರುಗಿದವನೆ 'ಧನಿಕುಲೆ ಮರ ಕಡಿಸ್ತಿದ್ದೀರಾ?...' ಎಂದು ಪ್ರಶ್ನಿಸಿದ್ದ. ಆತನ ಪ್ರಶ್ನೆಗೆ ಸಾಧುಶೆಟ್ಟಿ ಅಸಹನಿತನಾಗಿ 'ಹೌದು ಕಡಿಸ್ತಿದ್ದೇನೆ; ಏನಂತೆ ಈಗ, ನಿನ್ನನ್ನು ಕೇಳಿ ಕಡಿಸ್ಬೇಕಿತ್ತ... ನಾನು? ಕೋಳಿ ಕೇಳಿ ಮಸಾಲೆ ಅರಿಬೇಕನಾ... ನಾನು?'

'ಅಲ್ಲ... ಅಲ್ಲ ಸ್ವಾಮಿ... ಇದು ನಿಮ್ಮದೇ ಗದ್ದೆ; ಎಲ್ಲವೂ ನಿಮ್ಮದೇ... ನನ್ನದು ನಿಮ್ಮ ಚಾಲಗೇಣಿಯ ಗೈಮೆ ಅಷ್ಟೆ. ಆ ಗದ್ದೆಯ ಹುಣಿಯಲ್ಲಿ ನಾನು ಮಗುವಾಗಿ ಓಡಾಡುತ್ತ ಇರುವಾಗ ನನ್ನಜ್ಜ ತಂದು ನೆಟ್ಟ ಸಸಿಯದು; ಅದನ್ನು ನೆಡುವಾಗ...'

ಇನ್ನೂ ಆತನ ಮಾತು ಪೂರ್ತಿ ಮುಗಿದಿಲ್ಲ ಅಷ್ಟರಲ್ಲೇ ಅವನ ಧಣಿ ಅಂದಿದ್ದರು 'ನೆಟ್ಟರೆ ಏನಂತೆ? ಆಯ್ತು, ಸಸಿ ನಿನ್ನಜ್ಜನದ್ದು, ಜಾಗ ಯಾರಪ್ಪನದ್ದಂತೆ? ಅವನ ಅಪ್ಪಂದಾ?...'

'ಇಲ್ಲ... ಇಲ್ಲ ಧನಿಗಳೇ, ಅಷ್ಟು ದೂರದ ಮಾತ್ಯಾಕೆ ? ನನ್ನ ಒಂದೇ ಒಂದು ಮಾತು ನೀವು ಕೇಳಿಸ್ಕೊಳ್ಳಿ ಅಷ್ಟೇ...'

'ಹಾಂsss... ಹೇಳು... ಏನದು?'

'ನನ್ನಜ್ಜ ಆ ಎರಡು ಗಿಡಗಳನ್ನು ನೆಡುವಾಗ ನಾನು ಸಣ್ಣ ಹುಡುಗ. ಆಗ ಅವ್ರು ನನ್ನಲ್ಲಿ ಹೇಳಿದ್ರು... 'ನಾನು ಇರುವ ವರೆಗೆ ಈ ಗಿಡಗಳನ್ನು ನನ್ನ ಮಕ್ಕಳ ಹಾಗೆ ನಾನು ಸಾಕ್ತೇನೆ ಮಗಾ... ನನ್ನ ಕಾಲಾನಂತರ, ನೀನೂ ಇವುಗಳನ್ನು ನಿನ್ನ ಮಕ್ಕಳ ಹಾಗೆ ಸಾಕ್ಬೇಕು... ನಿನ್ನ ಮಕ್ಕಳು ಕೈಗೆ ಬಂದ ನಂತರದಲ್ಲಿ ನಿನ್ನ ಮಕ್ಕಳಿಗೂ ನೀನು ಇದನ್ನೇ ಹೇಳ್ಬೇಕು... ಅಂತ...'

'ಏನಂತೆ ಅವನ್ದು?... ಯಾರ ಜಾಗದಲ್ಲಿ ಯಾರ ಮಕ್ಕಳನ್ನು ಬೆಳೆಸ್ಬೇಕಂತೆ? ನನ್ನ ಜಾಗದಲ್ಲಿ ಅವನ್ದೇನು ಕಾರುಭಾರಿನ ಮಾತು ಮಾರಾಯ?!'

'ಇಲ್ಲ ಧನಿಗಳೇ... ಕೋಪ ಬೇಡ ಪಿಸೆಂಟ್ ಮಾತೇ ಬೇಡ. ನಿಮ್ಮ ಜಾಗದಲ್ಲಿರುವುದನ್ನು ನೀವು ಏನು ಬೇಕಾದರೂ ಮಾಡ್ಕೊಳ್ಳಿ; ಆ ಮರದ ಬಗ್ಗೆ ನನ್ನ ಕುಟುಂಬದ ಹಿರೀಕರ ಮನಸ್ಸನ್ನು ನಿಮಗೆ ತಿಳಿಸಿದೆ ಅಷ್ಟೆ. ನನ್ನದೀಗ ಇಳಿಪ್ರಾಯ. ದೇವ ಪಟ್ಲೇರಿಗಿಂತ(ದೇವಪ್ಪಶೆಟ್ಟರು) ನಾನು ಹತ್ತಿಪ್ಪತ್ತು ವರ್ಷ ದೊಡ್ಡವನಿರ್ಬೇಕು. ನಾನೀಗ ಆಚೆಗೆ ಹತ್ತಿರವಾದವನು. ಆ ಮರಗಳು ನನ್ನವು, ನಾನು ಬೆಳೆಸಿದವು, ನನ್ನ ಬಳಕೆಗೇ ಬೇಕು ಎಂಬ ಆಸೆಯಿಂದ ಆ ಮರಗಳ ಬಗ್ಗೆ ಹೇಳ್ತಿಲ್ಲ ನಾನು. ನನ್ನ ಮೂವರು ಹೆಣ್ಮಕ್ಕಳಿಗೂ ನನ್ನ ಹಾಗೆ ಬಿಟ್ಟಿಚಾಕರಿ ಮಾಡುವವರಿಗೆ ಕೊಟ್ಟು ಮದುವೆ ಮಾಡಿದೆ. ಇರುವ ಒಬ್ಬ ಮಗನನ್ನು ನೀವೇ ನಿಮ್ಮ ಭಾವನ ಹೋಟೆಲಿಗೆ ತಟ್ಟೆ ಲೋಟ ತೊಳೆಯುದಕ್ಕೆ ಬೊಂಬಾಯಿಗೆ ಕಳಿಸಿಬಿಟ್ರಿ. ಇನ್ನು ನಿಮ್ಮ ಈ ಚಾಲಗೇಣಿ ಗದ್ದೆಗಳನ್ನು ನಾನೆಷ್ಟು ದಿನ ಗೇಯಬಲ್ಲೆ ಅಂತಾ ನೀವೇ ಹೇಳಿ ದನಿಗಳೇ?... ನಿಮ್ಮ ಚಾಲಗೇಣಿಯಲ್ಲಿ ನಾನು ಇರುವವರೆಗೆ ನನ್ನ ಕಣ್ಣೆದುರಿಗೇ ಆ ಮರಗಳಿರಲಿ... ಅನ್ನುವ ಆಸೆ ನನ್ನದು, ಅಷ್ಟೆ...'

ತಿಂಮಪೂಜಾರಿಯ ಮಾತು ಸಾಧು ಶೆಟ್ಟಿಯ ಮನಸ್ಸಿಗೆ ನಾಟಿತೋ ಇಲ್ಲವೋ, ಆದರೆ ಅದು ದೇವಪ್ಪ ಶೆಟ್ರು ಮತ್ತು ಮಾರಪ್ಪ ಆಳ್ವರ ಮನಸ್ಸಿಗೆ ನೇರವಾಗಿ ನಾಟಿತ್ತು. ಸಾಧು ಶೆಟ್ಟಿ... ಇನ್ನೇನೋ ಮಾತನಾಡಬೇಕೆನ್ನುವಷ್ಟರಲ್ಲಿ ಆತನ ಮಾತಿಗಡ್ಡ ಬಂದ ದೇವಪ್ಪಶೆಟ್ರು ತಿಂಮಪೂಜಾರಿಗೆ ಅಂದರು:

'ತಿಂಮ... ನೀನು ನನಗಿಂತ ಹಿರಿಯ; ನಿನ್ನೆದುರೇ ನಾನು ಬೆಳೆದವನು. ಆ ಗೌರವದಿಂದಲೇ ನಿನ್ನಲ್ಲಿ ಈಗ ಮಾತನಾಡ್ತಿದ್ದೇನೆ. ನೀನು ನಿನ್ನ ಅಜ್ಜ ಅಪ್ಪನ ಹಾಗೆಯೇ ದೈವ, ದೇವ್ರು, ದೊಡ್ಡವ್ರು ಅಂತಾ ಭಯಭಕ್ತಿಯಿಂದ ಬದುಕಿದವನು. ನಮ್ಮ ಕೆರೆಕೋಡಿಯಲ್ಲಿ ಎಂದೋ ಅಡ್ಡಬಿದ್ದಿರುವ ಧೂಮಾವತಿ ದೈವವನ್ನು ಎತ್ತಿ ನಿಲ್ಲಿಸುವ ಕೆಲಸಕ್ಕೆ ನಾನೀಗ ಕೈ ಹಾಕಿದ್ದೇನೆ. ಊರಿಗೇ ಒಳ್ಳೆದಾಗ್ಲಿ ಎನ್ನುವ ಆಸೆ ಅದು ಅಷ್ಟೆ. ಇದು ನನ್ನೊಬ್ಬನಿಂದ ಆಗುವ ಕೆಲಸವಲ್ಲ ಮಾರಾಯ; ನಾಲ್ಕೂರಿನವರು, ಪರವೂರಿನವರು,